ವಿಶ್ವವಾಣಿ
ಬೆಂಗಳೂರು
vishwavani.news
13.02.2018 ಮಂಗಳವಾರ

# ಜೈಲಲ್ಲೇ ಕೊಳೆಯುತ್ತಿದ್ದಾರೆ ವಿಚಾರಣಾಧೀನ ಕೈದಿಗಳು



ದೇಶದಲ್ಲಿ ಸುಮಾರು 3 ಲಕ್ಷ ವಿಚಾರಣಾಧೀನ ಕೈದಿಗಳು ಜೈಲಿನಲ್ಲಿದ್ದು, ಇವರಲ್ಲಿ ಅನೇಕರು ಸಿಆರ್‌ಪಿಸಿ ಸೆಕ್ಷನ್ 436ಎ ಪ್ರಕಾರ ಜಾಮೀನು ಪಡೆಯಲು ಅರ್ಹರಾಗಿದ್ದರೂ ಮಾಹಿತಿಯ ಕೊರತೆಯಿಂದ ಜೈಲಿನಲ್ಲೇ ಕೊಳೆಯುತ್ತಿದ್ದಾರೆ. ಈ ವಿಚಾರವಾಗಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ್ದರೂ ರಾಜ್ಯ ಸರ್ಕಾರಗಳು ಕಾರ್ಯ ಪ್ರವೃತ್ತರಾಗಲು ವಿಫಲರಾಗಿವೆ. ಜೈಲಿನಲ್ಲಿ ಕೈದಿಗಳ ಪ್ರಮಾಣ ಹೆಚ್ಚಾಗಿರುವ ಬಗ್ಗೆ ಸುದ್ದಿಗಳು ಕೇಳಿ ಬರುತ್ತಿದ್ದು, ಈ ಹಂತದಲ್ಲಿ ಕೆಲವು ಪ್ರಮುಖ ಮಾಹಿತಿಗಳು ನಿಮ್ಮ ಮುಂದಿವೆ.

### ಅಧಿಕ ಪ್ರಮಾಣ

ಸರ್ಕಾರದ ಮಾಹಿತಿ ಪ್ರಕಾರ ಭಾರತದ ಜೈಲಿನಲ್ಲಿ ಒಟ್ಟು 3,80,876 ಕೈದಿಗಳಿಗೆ ಮಾತ್ರ ಅವಕಾಶವಿದ್ದು, ಸುಮಾರು 4,33,003 ಮಂದಿ ಜೈಲಿನಲ್ಲಿದ್ದಾರೆ. ನಿಗದಿತ ಸಂಖ್ಯೆಗಿಂತ ಶೇ.14ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಕೈದಿಗಳಿದ್ದು ಜೈಲುಗಳು ತುಂಬಿ ಹೋಗಿವೆ. ಇವರಲ್ಲಿ ಸುಮಾರು 3 ಲಕ್ಷಮಂದಿ ವಿಚಾರಣಾ ಕೈದಿಗಳಿದ್ದಾರೆ.

### ಯುಪಿ-ಬಿಹಾರದಲ್ಲಿ ಸಿಂಹಪಾಲು

ದೇಶದಲ್ಲಿ ಸುಮಾರು 2.93 ಲಕ್ಷದಷ್ಟು ವಿಚಾರಣಾ ಕೈದಿಗಳಿದ್ದು, ಸುಮಾರು 1 ಲಕ್ಷ ಕೈದಿಗಳು ಉತ್ತರ ಪ್ರದೇಶ ಹಾಗೂ ಬಿಹಾರ ಜೈಲುಗಳಲ್ಲಿ ದ್ದಾರೆ. ದೇಶದ ಮೂರನೇ ಒಂದು ಭಾಗದಷ್ಟು ವಿಚಾರಣಾ ಕೈದಿಗಳು ಈ ಎರಡು ರಾಜ್ಯಗಳಲ್ಲಿದ್ದಾರೆ. ವಿಚಾರಣಾ ಕೈದಿಗಳ ಪ್ರಮಾಣದಲ್ಲಿ ಶೇ.96 ರಷ್ಟು ಪುರುಷರು ಹಾಗೂ ಕೇವಲ ಶೇ.4 ರಷ್ಟು ಮಾತ್ರ ಮಹಿಳೆಯರಿದ್ದಾರೆ.

### ಜಾರಿಯಾಗದ ಸೆಕ್ಷನ್ 436ಎ

ಕೈದಿಗಳ ವಿಚಾರ ಆಯಾ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರಲಿದ್ದು, ಈ ವಿಚಾರವಾಗಿ ಕೇಂದ್ರ ಗೃಹ ಸಚಿವಾಲಯ 2013ರಲ್ಲೇ ಸಿಆರ್‌ಪಿಸಿ ಸೆಕ್ಷನ್ 436ಎಯಲ್ಲಿ ಈ ಸಮಸ್ಯೆಗೆ ಪರಿಹಾರಕ್ಕೆ ಅವಕಾಶ ನೀಡಿತ್ತು. ವಿಚಾರಣಾ ಕೈದಿಗಳಿಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಲ್ಲೂ ಪರಿಶೀಲನಾ ಸಮಿತಿ ರಚನೆ ಮಾಡಿ ಪ್ರತಿ ಮೂರು ತಿಂಗಳಿಗೊಮ್ಮೆ ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಪ್ರಕರಣಗಳ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿತ್ತಾದರೂ ಯಾವವುದೇ ರಾಜ್ಯ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

### ನಾಗರಿಕರು ಏನು ಮಾಡಬಹುದು?

ಆರ್‌ಟಿಐ ಮೂಲಕ ಪರಿಶೀಲನಾ ಸಮಿತಿ ರಚನೆಯಾಗಿದೆಯೇ ಇಲ್ಲವೇ? ಆಗಿದ್ದರೆ ಎಷ್ಟು ಪ್ರಕರಣಗಳ ಸಮೀಕ್ಷೆ ನಡೆದಿದೆ? ಜಾಮೀನಿಗೆ ಸಂಬಂಧಿಸಿದಂತೆ ವಿಚಾರಣಾ ಕೈದಿಗಳಿಗೆ ಮಾಹಿತಿ ನೀಡಲಾಗಿದೆಯೇ? ಅವರಿಗೆ ಕಾನೂನು ನೆರವು ಸಿಕ್ಕಿದೆಯೇ? ಎಂಬ ಬಗ್ಗೆ ಮಾಹಿತಿ ಪಡೆಯಬೇಕು. ಇವುಗಳಲ್ಲಿ ಆಗದಿರುವ ಪ್ರಗತಿ ಕುರಿತು ಕೇಂದ್ರ ಮಾಹಿತಿ ಸಮಿತಿಗೆ ದೂರು ನೀಡಬಹುದು.

## ಇವತ್ತಿನ ರೇಟು

| | | |
|---|---|---|
| ಸೆನ್ಸೆಕ್ಸ್ ↑ | 34300 | 294 |
| ನಿಫ್ಟಿ ↑ | 10539 | 84 |

| ₹ ಮೌಲ್ಯ | |
|---|---|
| $ | 64.31 |
| € | 78.89 |
| £ | 89.01 |

### ಆಭರಣ

| ಚಿನ್ನ | |
|---|---|
| ಬೆಂಗಳೂರು, 10 ಗ್ರಾಂಗೆ | |
| ಶುದ್ಧ ಚಿನ್ನ | 30,680 |
| ಒಡವೆ ಚಿನ್ನ | 28,800 |
| ಮುಂಬೈ, 10 ಗ್ರಾಂಗೆ | |
| ಶುದ್ಧ ಚಿನ್ನ | 30,650 |
| ಒಡವೆ ಚಿನ್ನ | 28,770 |

| ಬೆಳ್ಳಿ | |
|---|---|
| ಬೆಂಗಳೂರು, ಪ್ರತಿ ಕೆಜಿಗೆ | |
| ಶುದ್ಧ ಬೆಳ್ಳಿ | 40,642 |
| ಮುಂಬೈ, ಪ್ರತಿ ಕೆಜಿಗೆ | |
| ಶುದ್ಧ ಬೆಳ್ಳಿ | 40,741 |

### ಕೋಳಿ/ಮೊಟ್ಟೆ

| ಇವತ್ತಿನ ರೇಟ್ | |
|---|---|
| 100ಕ್ಕೆ | 371 |
| ಸುಗುಣ ಚಿಕನ್ ಕೆ.ಜಿ. | 75 |
| ವೆಂಕೋಬ್ ಚಿಕನ್ ಕೆ.ಜಿ. | 55 |

### ರೇಷ್ಮೆ (ರಾಮನಗರ-ಕೆ.ಗೆ)

| | |
|---|---|
| ಬೈವೋಲ್ಟಿನ್ | 335-628 |
| ಮಿಶ್ರತಳಿ | 228-480 |

### ಏಲಕ್ಕಿ ಪ್ರತಿ ಕೆ.ಜಿ. (ಹಸಿರು)

| | |
|---|---|
| ಸಕಲೇಶಪುರ | 630 |
| ಮಡಿಕೇರಿ | 550 |

### ಅಡಕೆ ಶಿವಮೊಗ್ಗ (ಕ್ವಿಂಟಾಲ್‌ಗೆ)

| | |
|---|---|
| ಗೊರಬಲು | 21,289 |
| ರಾಶಿ | 36,509 |
| ಸರಕು | 54,920 |

### ಎಪಿಎಂಸಿ

ಯಶವಂತಪುರ

| ಅಕ್ಕಿ - ಸೋನಾ ಮಸೂರಿ | |
|---|---|
| ದಪ್ಪ | 2,800 |
| ಐಆರ್-64 | 3,540 |
| ಮಧ್ಯಮ | 6,100 |
| ರಾಗಿ (ಉತ್ತಮ) | 3,000 |
| ರಾಗಿ(ಸ್ಥ) | 2,450 |
| ಜೋಳ (ವಿಜಯಪುರ) | 3,200 |
| ಅಚ್ಚುಬೆಲ್ಲ | 4,000 |
| ಮುದ್ದೆಬೆಲ್ಲ | 4,900 |
| ಧನಿಯಾ (ಸ್ಥ) | 9,500 |
| ಬ್ಯಾಡಗಿ ಮೆಣಸು. | 18,800 |
| ಗುಂಟೂರು ಮೆ. | 8,500 |
| ಬಿಳಿ ಈರುಳ್ಳಿ | 2,000 |
| ಸಣ್ಣ ಈರುಳ್ಳಿ (ಸ್ಥ) | 2,500 |
| ಬೆಳ್ಳುಳ್ಳಿ | 5,000 |
| ಹೆಸರುಕಾಳು (ಸ್ಥ) | 7,400 |
| ಬಟಾಣಿ (ಹಸಿ) | 5,000 |
| ಗೋಧಿ (ಸ್ಥ) | 3,300 |
| ಕಡಲೆಬೇಳೆ | 6,200 |
| ಅವರೆಬೇಳೆ | 7,900 |
| ತೊಗರಿಬೇಳೆ | 7,400 |
| ಹೆಸರುಬೇಳೆ | 7,300 |

### ಕಾಫಿಧಾರಣೆ

| ಚಿಕ್ಕಮಗಳೂರು | 50ಕೆಜಿ |
|---|---|
| ಅರೇಬಿಕಾ ಪಾರ್ಚ್‌ಮೆಂಟ್ | 8,600 |
| ಅರೇಬಿಕಾ ಚೆರ್ರಿ | 3,850 |
| ರೋಬೊಸ್ಟ ಪಾರ್ಚ್‌ಮೆಂಟ್ | 5650 |
| ರೋಬೊಸ್ಟ ಚೆರ್ರಿ | 3125 |

### ಹಾಪ್‌ಕಾಮ್ಸ್

| | |
|---|---|
| ಟೊಮೆಟೊ | 10 |
| ಆಲೂಗೆಡ್ಡೆ | 25 |
| ಕ್ಯಾರೆಟ್ (ನಾಟಿ) | 25 |
| ಹುರುಳಿಕಾಯಿ | 24 |
| ಕ್ಯಾಬೇಜ್ | 14 |
| ಹೂಕೋಸು | 25 |
| ಹಸಿಮೆಣಸಿನಕಾಯಿ | 32 |
| ಕೊತ್ತಂಬರಿಸೊಪ್ಪು | 26(ಕಟ್ಟು) |
| ಮೆಂತೆಸೊಪ್ಪು | 30(ಕಟ್ಟು) |
| ಬೆಂಡೆಕಾಯಿ | 28 |
| ಸೌತೆಕಾಯಿ | 25 |
| ಅವರೆಕಾಯಿ | 32 |
| ಅಣಬೆ | 200 |
| ಕುಂಬಳಕಾಯಿ | 14 |
| ಸ್ವೀಟ್ ಕಾರ್ನ್ | 47 |
| ಪಚ್ಚಬಾಳೆ | 30 |
| ಏಲಕ್ಕಿ ಬಾಳೆ | 67 |
| ಕಿತ್ತಳೆ | 65 |
| ಮೊಸಂಬಿ | 79 |

ಸುಂಜವಾನ್ ಸೇನಾ ಶಿಬಿರದ ಮೇಲೆ ದಾಳಿ ಆರೋಪ ತಳ್ಳಿಹಾಕಿದ ಪಾಕ್

# ಉಗ್ರರ ವಿರುದ್ಧ ಕಾರ್ಯಾಚರಣೆ ಅಂತ್ಯ

ಪಿಟಿಐ ಶ್ರೀನಗರ

ಕಳೆದ ಮೂರು ದಿನಗಳಿಂದ ಸುಂಜುವಾನ್ ಸೇನಾ ಶಿಬಿರದ ಮೇಲೆ ಉಗ್ರರು ನಡೆಸುತ್ತಿದ್ದ ದಾಳಿ ಅಂತ್ಯವಾಗಿದೆ. ಸೇನಾ ಪಡೆಗಳು ಉಗ್ರರು ಅಡಗಿಕೊಂಡಿದ್ದ ಶಿಬಿರವನ್ನು ತೆರವುಗೊಳಿಸಿವೆ. ಈ ಸ್ಥಳಕ್ಕೆ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೇಂದ್ರ ಗೃಹ ಸಚಿವ ರಾಜ್‌ನಾಥ್ ಸಿಂಗ್ ಅವರೂ ಸಹ ಸೋಮವಾರ ದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ.

ಉಗ್ರರು ದಾಳಿ ನಡೆಸಿದ ಸಂಜುವಾನ್ ಸೇನಾ ಶಿಬಿರಕ್ಕೆ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಸೇನಾ ಮುಖ್ಯಸ್ಥ ಬಿಪಿನ್ ರಾವತ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಸಚಿವರು ದಾಳಿಯಲ್ಲಿ ಗಾಯಗೊಂಡು ಸತ್ವಾರ ಸೇನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಾಗರಿಕರು ಹಾಗೂ ಯೋಧರನ್ನು ಭೇಟಿ ಮಾಡಿ ವಿಚಾರಿಸಿ, ದಾಳಿಯಲ್ಲಿ ಹುತಾತ್ಮರಾದ ಯೋಧರ ಕುಟುಂಬ ವನ್ನು ಭೇಟಿ ನೀಡಿ ಸಂತೈಸಿದರು ಎಂದು ಸೇನಾ ಮೂಲಗಳು ತಿಳಿಸಿವೆ. ಕಾಶ್ಮೀರಕ್ಕೆ ಆಗಮಿಸುವುದಕ್ಕೂ ಮುನ್ನ ಸಚಿವೆ ನಿರ್ಮಲಾ ಸೀತಾರಾಮನ್ ವರು ದೆಹಲಿಯಲ್ಲಿ ಮೂರೂ ಪಡೆಗಳ ಮುಖ್ಯಸ್ಥರು ಹಾಗೂ ರಕ್ಷಣಾ ಇಲಾಖೆ ಕಾರ್ಯದರ್ಶಿಗಳೊಂದಿಗೆ ಮಾತುಕತೆ ನಡೆಸಿದರು.

ಸೇನೆಯು ಸೇನಾ ಶಿಬಿರದಲ್ಲಿ ಅಡಗಿದ್ದ ಎಲ್ಲಾ ಮೂವರು ಉಗ್ರರನ್ನು ಹತ್ಯೆ ಮಾಡಿದ್ದಾರೆ. ಉಗ್ರರ ದಾಳಿಯಿಂದ ಒಟ್ಟು ಐವರು ಯೋಧರು ಸೇರಿದಂತೆ ಆರು ಮಂದಿ ಹತ್ಯೆಗೀಡಾಗಿದ್ದರು. ಈ ಮಧ್ಯೆ ಸೋಮವಾರ ಮುಂಜಾನೆ ಶ್ರೀನಗರದ ಕರಣ್ ನಗರದ ಸಿಆರ್‌ಪಿಎಫ್‌ನ ಯೋಧರೊಬ್ಬರು ಮತ್ತೊಂದು ದಾಳಿ ನಡೆಯುವುದನ್ನು ತಪ್ಪಿಸಿದ್ದಾರೆ ಎಂದು ಸೇನಾ ಮೂಲಗಳು ತಿಳಿಸಿವೆ.

ಸುಮಾರು ಐವತ್ತು ಗಂಟೆಗಳ ಕಾಲ ನಡೆದ ಸತತ ಕಾರ್ಯಾಚರಣೆಯಲ್ಲಿ ಸೇನೆ ನಾಲ್ಕು ಉಗ್ರರನ್ನು ಸೆದೆಬಡಿದಿದ್ದು, ಓರ್ವ ನಾಗರಿಕ ಹಾಗೂ ಐದು ಮಂದಿ ಯೋಧರು ಹುತಾತ್ಮರಾಗಿದ್ದಾರೆ. ಸೇನಾ ಸಮವಸ್ತ್ರದಲ್ಲಿ ಜೈಶ್ -ಎ- ಮೊಹಮ್ಮದ್ ಸಂಘ ಟನೆಯ ಉಗ್ರರು ಭಾರೀ ಶಸ್ತ್ರಾಸ್ತ್ರಗಳೊಂದಿಗೆ ದಾಳಿ ಮಾಡಿದ್ದರು. ಹತ್ಯೆಯಾದ ಉಗ್ರರಿಂದ ಎಕೆ 56 ಬಂದೂಕುಗಳು, ಬ್ಯಾರೆಲ್ ಗ್ರೆನೇಡ್ ಲಾಂಚರ್ಸ್, ಸ್ಫೋಟಕ ವಸ್ತುಗಳು ಹಾಗೂ ಗ್ರೇನೇಡ್‌ಗಳನ್ನು ವಶಪಡೆದುಕೊಳ್ಳಲಾಗಿದೆ. ಸ್ಥಳಕ್ಕೆ ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು ಭೇಟಿ ನೀಡಿದ್ದು ಸಾಕ್ಷ್ಯಾಧಾರಗಳ ಪರಿಶೀಲನೆ ನಡೆಯುತ್ತಿದೆ.

**ಆರೋಪ ನಿರಾಕರಿಸಿದ ಪಾಕ್:** ಸುಂಜುವಾನ್ ದಾಳಿಯಲ್ಲಿ ಪಾಕಿಸ್ತಾನದ ಕೈವಾಡವಿದೆ ಎಂಬ ಭಾರತದ ಆರೋಪವನ್ನು ಪಾಕಿಸ್ತಾನ ತಳ್ಳಿ ಹಾಕಿದೆ. ದಾಳಿ ನಡೆದ ತಕ್ಷಣ ಭಾರತೀಯ ಅಧಿಕಾರಿಗಳು ಈ ದಾಳಿಯಲ್ಲಿ ಪಾಕ್ ಕೈವಾಡ ಇದೆ ಎಂದು ಶಂಕಿಸಿದ್ದರು. ಆದರೆ ಈ ದಾಳಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ಪಾಕ್ ವಿದೇಶಾಂಗ ಸಚಿವಾಲಯ ಹೇಳಿದೆ.




ಸುಂಜುವಾನ್ ಸೇನಾ ಶಿಬಿರದ ಮೇಲೆ ನಡೆದ ದಾಳಿ ಬಳಿಕ ಬಿಗಿ ಬಂದೋಬಸ್ತ್ ಏರ್ಪಡಿಸಿರುವುದು.

### ಮಾತುಕತೆಯಿಂದ ಮಾತ್ರ ಪರಿಹಾರ ಸಾಧ್ಯ



ಸುಂಜುವಾನ್ ದಾಳಿ ಕುರಿತು ಪ್ರತಿಕ್ರೀಯಿಸಿರುವ ಜಮ್ಮು ಕಾಶ್ಮೀರ ಮುಖ್ಯ ಮಂತ್ರಿ ಮೆಹಬೂಬ ಮುಫ್ತಿ, ಇದಕ್ಕೆ ಯದ್ಧವೊಂದೇ ಪರಿಹಾರವಲ್ಲ. ಪರಸ್ಪರ ಮಾತುಕತೆ ಮೂಲಕ ರಕ್ತ ಪಾತವನ್ನು ಅಂತ್ಯಗೊಳಿಸಬಹುದು ಎಂದು ಹೇಳಿದ್ದಾರೆ. ನಾವಲ್ಲದೇ ಇನ್ಯಾರು ಪಾಕಿಸ್ತಾನದ ಜತೆ ಮಾತುಕತೆ ನಡೆಸಬೇಕು? ಇದಕ್ಕಾಗಿ ನನ್ನನ್ನು ದೇಶ ವಿರೋಧಿ ಎಂದು ಕರೆಯುತ್ತಾರೆ. ಆದರೆ ಈ ರಕ್ತಪಾತಕ್ಕೆ ಅಂತ್ಯ ಹಾಡಲು ಪಾಕಿಸ್ತಾನದೊಂದಿಗೆ ಮಾತುಕತೆಯೊಂದೇ ಪರಿಹಾರ ಎಂದು ಹೇಳಿದ್ದಾರೆ.

### ಗಾಯಗೊಂಡಿದ್ದ ಯೋಧ ಹುತಾತ್ಮ

ಜಮ್ಮು- ಕಾಶ್ಮೀರದ ಪೂಂಚ್ ವಲಯದ ನಿಯಂತ್ರಣ ರೇಖೆ ಬಳಿ ಫೆ.4 ರಂದು ಪಾಕಿಸ್ತಾನ ನಡೆಸಿದ್ದ ಅಪ್ರಚೋದಿತ ಗುಂಡಿನ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಯೋಧ ಗುನ್ನೆರ್ ಕಿಶೋರ್ ಕುಮಾರ್ ಸೋಮವಾರ ಹುತಾತ್ಮರಾಗಿದ್ದಾರೆ.ಬಿಹಾರದ ಬರ್ಮಹಾ ಗ್ರಾಮದ ಗುನ್ನೆರ್ ಕಿಶೋರ್ ಕುಮಾರ್ ವೀರ ಯೋಧರಾಗಿದ್ದು, ಅವರ ತ್ಯಾಗವನ್ನು ದೇಶ ಎಂದಿಗೂ ನೆನೆಯುತ್ತದೆ ಎಂದು ಸೇನೆ ಹೇಳಿದೆ. ಫೆ.4 ರಂದು ಪಾಕಿಸ್ತಾನ ಸೇನೆ ಪೂಂಚ್ ವಲಯದ ನಿಯಂತ್ರಣ ರೇಖೆ ಬಳಿ ಭಾರತೀಯ ಸೇನೆಯನ್ನು ಗುರಿಯಾಗಿ ರಿಸಿಕೊಂಡು ಅಪ್ರಚೋದಿತ ಗುಂಡಿನ ದಾಳಿ ಯಲ್ಲಿ ಕಿಶೋರ್ ಗಂಭೀರವಾಗಿ ಗಾಯ ಗೊಂಡಿದ್ದರು. ಬಳಿಕ ಅವರನ್ನು ಉಧಂಪುರದ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಹುತಾತ್ಮರಾಗಿದ್ದಾರೆ.

# ಜಯಲಲಿತಾ ಭಾವಚಿತ್ರಕ್ಕೆ ಡಿಎಂಕೆ ವಿರೋಧ

**ಚೆನ್ನೈ:** ತಮಿಳುನಾಡು ವಿಧಾನಸಭೆಯಲ್ಲಿ ಮಾಜಿ ಮುಖ್ಯ ಮಂತ್ರಿ ದಿ. ಜಯಲಲಿತಾ ಭಾವಚಿತ್ರವನ್ನು ಅನಾವರಣಗೊಳಿ ಸಿದ್ದನ್ನು ವಿರೋಧಿಸಿ ವಿರೋಧ ಪಕ್ಷ ಡಿಎಂಕೆ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದೆ. ಮಾಜಿ ಸಿಎಂ ಜಯಲಲಿತಾ ಅವರ ಬೃಹತ್ ಭಾವಚಿತ್ರವನ್ನು ಸೋಮವಾರ ವಿಧಾನ ಸಭೆಯಲ್ಲಿ ವಿಧಾನಸಭಾಧ್ಯಕ್ಷ ಧನಪಾಲ್ ಅನಾವರಣಗೊಳಿಸಿದ್ದರು. ಸರಕಾ ರದ ನಿರ್ಧಾರವನ್ನು ಪ್ರತಿಭಟಿಸಿ ಪ್ರತಿಪಕ್ಷಗಳು ಸಭಾ ತ್ಯಾಗ ಮಾಡಿದ್ದವು. ಅಕ್ರಮ ಆಸ್ತಿ ಗಳಿಕೆ ಪ್ರಕರಣಲ್ಲಿ ಜಯಲಲಿತಾ ಅಪರಾಧಿಯಾಗಿರುವ ಕಾರಣ ಈ ಗೌರವಕ್ಕೆ ಅವರು ಅರ್ಹರಲ್ಲ. ಆದ್ದರಿಂದ ಅವರ ಭಾವಚಿತ್ರವನ್ನು ತೆರವುಗೊಳಿಸಬೇಕೆಂದು ಡಿಎಂಕೆ ಶಾಸಕ ಅನ್ಬಳಗನ್ ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ. ಜಯಲಲಿತಾ ಅವರ ಭಾವಚಿತ್ರವನ್ನು ಅನಾವರಣಗೊಳಿಸಿರುವ ಈ ದಿನವನ್ನು ಡಿಎಂಕೆ ಕಾರ್ಯಾಧ್ಯಕ್ಷ ಸ್ಟಾಲಿನ್ ಕಪ್ಪು ದಿನ ಎಂದು ಕರೆದಿದ್ದಾರೆ.

# ಶಿವರಾತ್ರಿಗೆ ಉಗ್ರರ ಭೀತಿ

**ಮುಂಬೈ:** ಫೆ.13 ರಂದು ದೇಶಾದ್ಯಂತ ನಡೆಯಲಿರುವ ಶಿವರಾತ್ರಿ ಹಬ್ಬದಂದು ಶಿವಾಲಯಗಳನ್ನು ಗುರಿಯಾಗಿಸಿಕೊಂಡು ಉಗ್ರರು ದಾಳಿ ನಡೆಸುವ ಮುನ್ಸೂಚನೆಯಿದೆ ಎಂದು ಗುಪ್ತಚರ ಇಲಾಖೆ ಮಾಹಿತಿ ನೀಡಿದೆ. ವಿಶೇಷವಾಗಿ ಜ್ಯೋತಿರ್ಲಿಂಗ ದೇವಾಲಯಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಯುವ ಸಾಧ್ಯತೆ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿದೆ. ಈ ಮಾಹಿತಿಯ ಆಧಾರದಲ್ಲಿ ಮಹಾರಾಷ್ಟ್ರ ಪೊಲೀಸ್ ಇಲಾಖೆ ನಾಸಿಕ್‌ನ ತ್ರಯಂಬಕೇಶ್ವರ ದೇವಾಲಯದ ಸುತ್ತ ಬಿಗಿ ಬಂದೋಬಸ್ತ್ ಏರ್ಪಡಿಸಿದೆ. ಪಂಜಾಬ್, ಹರಿಯಾಣ, ಜಮ್ಮು, ಉತ್ತರ ಪ್ರದೇಶ, ರಾಜಸ್ಥಾನ, ಗುಜರಾತ್ ಮತ್ತು ಉತ್ತರಾಖಂಡ್ ಮುಂತಾದ ಪ್ರದೇಶಗಳಲ್ಲಿರುವ ಹಲವು ದೇವಾಲಯಗಳಲ್ಲೂ ಜಾಗರೂಕತೆ ವಹಿಸುವಂತೆ ಎಚ್ಚರಿಕೆ ನೀಡಲಾಗಿದೆ. ದೇಶದ ಪ್ರಸಿದ್ಧ ಸ್ಥಳಗಳಲ್ಲಿನ ಶಿವಾಲಯಗಳಲ್ಲಿ 13 ರಿಂದ 14ರ ವರೆಗೆ ಮಹಾಶಿವರಾತ್ರಿ ವಿಜೃಂಭಣೆಯಿಂದ ನಡೆಯಲಿದ್ದು ಹೆಚ್ಚು ಭಕ್ತರು ಸೇರುವ ಕಾರಣಕ್ಕೆ ಈ ಮುನ್ನೆಚ್ಚರಿಕೆಯನ್ನು ನೀಡಲಾಗಿದೆ.



# ಕಂಬಳ ತಡೆಗೆ ಸುಪ್ರಿಂ ನಕಾರ

**ದೆಹಲಿ:** ಕರಾವಳಿ ಸಂಸ್ಕೃತಿಯ ಭಾಗವಾಗಿರುವ ಕಂಬಳಕ್ಕೆ ಮಧ್ಯಂತರ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಇದರಿಂದ ಕರಾವಳಿಯ ಜನರು ನಿಟ್ಟುಸಿರು ಬಿಡುವಂತಾಗಿದ್ದು ಕಂಬಳ ನಿರಾತಂಕವಾಗಿ ನಡೆಯಲಿದೆ.



ಪ್ರಾಣಿಗಳ ಹಕ್ಕುಗಳಿಗೆ ಹೋರಾಟ ಮಾಡುತ್ತಿರುವ ಪೇಟಾ ಎಂಬ ಸಂಸ್ಥೆ ಕಂಬಳಕ್ಕೆ ತಡೆ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಲ್ಕರ್ ಹಾಗೂ ಡಿ.ವೈ. ಚಂದ್ರಚೂಡ್ ಅವರ ಪೀಠ ಕಂಬಳಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿ ಮುಂದಿನ ವಿಚಾರಣೆಯನ್ನು ಮಾ.12ಕ್ಕೆ ಮುಂದೂಡಿದೆ. ಕಳೆದ ವರ್ಷ ಜ.28ರಂದು ಕರ್ನಾಟಕ ಸಚಿವ ಸಂಪುಟ ಪ್ರಾಣಿಗಳ ಮೇಲಿನ ದೌರ್ಜನ್ಯ ಕಾಯಿದೆಗೆ ತಿದ್ದುಪಡಿ ತಂದು ಕಂಬಳಕ್ಕೆ ಅವಕಾಶ ಕಲ್ಪಿಸಿತ್ತು. ಈ ಕ್ರೀಡೆಯಲ್ಲಿ ಕೋಣಗಳಿಗೆ ಹಿಂಸೆಯಾಗುವುದಿಲ್ಲ. ನೀರು ಮತ್ತು ಕೆಸರು ಗದ್ದೆಯಲ್ಲಿ ಓಡುವುದರಿಂದ ಇವುಗಳ ಪಚನ ಕ್ರಿಯೆ ಮತ್ತು ದೇಹದ ಉಷ್ಣತೆ ನಿರ್ವಹಣೆಗೆ ಸಹಾಯಕವಾಗುತ್ತದೆ ಎಂದು ಸರಕಾರ ಪ್ರತಿಪಾದಿಸಿತ್ತು.

ಪೇಟಾ, ಕಂಬಳದಿಂದ ಪ್ರಾಣಿಗಳ ಮೇಲೆ ದೌರ್ಜನ್ಯ ಎಸಗಲಾಗುತ್ತದೆ ಎಂದು ಆರೋಪಿಸಿ ನ್ಯಾಯಾಲಯದ ಮೊರೆ ಹೋಗಿತ್ತು. ಭಾರತೀಯ ಪ್ರಾಣಿ ರಕ್ಷಣಾ ಸಂಸ್ಥೆಗಳ ಒಕ್ಕೂಟವೂ ಸಹ ಕರ್ನಾಟಕ ಸರಕಾರ ಕಾಯಿದೆಗೆ ತಿದ್ದುಪಡಿ ತಂದು ಹೋರಿಗಳ ಸ್ಪರ್ಧೆ ಕಂಬಳವನ್ನು ಕಾನೂನು ಬದ್ಧಗೊಳಿಪ್ರಶ್ನಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಪೇಟಾ ಪರವಾಗಿ ವಾದಿಸಿದ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಕೋಣಗಳ ಸ್ಪರ್ಧೆಗೆ ಕಾನೂನಿನ ಮಾನ್ಯತೆ ಇಲ್ಲ ಎಂದು ವಾದಿಸಿದ್ದರು.

ಕಂಬಳವನ್ನು ವಿಶೇಷವಾಗಿ ಕರಾವಳಿ ಭಾಗದ ಜಿಲ್ಲೆಗಳಾದ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಡೆಸಲಾಗುತ್ತದೆ. ಕಂಬಳವು ನವಂಬರ್ ಹಾಗೂ ಮಾರ್ಚ್ ನಡುವೆ ನಡೆಸಲಾಗುತ್ತದೆ. ನೊಗಕ್ಕೆ ಎರಡು ಕೋಣಗಳನ್ನು ಕಟ್ಟಿರುವ ಜೋಡಿಯನ್ನು ಕೆಸರು ಗದ್ದೆಯಲ್ಲಿ ಒಬ್ಬ ಮುನ್ನಡೆಸುತ್ತಾನೆ. ಕೆಸರು ಗದ್ದೆಯಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಹಲವಾರು ಜೋಡಿಗಳು ಭಾಗವಹಿಸುತ್ತವೆ. ಮೊದಲು ಗುರಿ ತಲುಪುವ ಜೋಡಿ ಗೆಲುವು ಸಾಧಿಸಿದೆ ಎಂದು ಘೋಷಿಸಲಾಗುತ್ತದೆ. ಉತ್ತಮ ಬೆಳೆ ಹಾಗೂ ಫಸಲು ಬರಲಿ ಎಂಬ ನಂಬಿಕೆಯಿಂದ ಈ ಸ್ಪರ್ಧೆಯನ್ನು ನಡೆಸಲಾಗುತ್ತದೆ.

# ಹೇಳಿಕೆ ಸಮರ್ಥಿಸಿಕೊಂಡ ಮೋಹನ್ ಭಾಗವತ್

**ದೆಹಲಿ:** 'ದೇಶ ಕಾಯುವುದಕ್ಕೆ ಸಂಘ ಪರಿವಾರ ಕೇವಲ ಮೂರು ದಿನಗಳಲ್ಲಿ ಯೋಧರನ್ನು ತಯಾರು ಮಾಡುತ್ತದೆ. ಇದೇ ನಮ್ಮ ಸಾಮರ್ಥ್ಯ' ಎಂಬ ವಿವಾದಾತ್ಮಕ ಹೇಳಿಕೆಯನ್ನು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸಮರ್ಥಿಸಿಕೊಂಡಿದ್ದಾರೆ. ಭಾನುವಾರ ನೀಡಲಾದ ಹೇಳಿಕೆಯಿಂದ ಭಾರತೀಯ ಯೋಧ ರಿಗೆ ಅಪಮಾನ ಮಾಡಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಟೀಕಿಸಿದ್ದರು. ಅಲ್ಲದೆ ಸಾಮಾಜಿಕ ಜಾಲತಾಣಗಳಲ್ಲೂ ಭಾಗವತ್ ಅವರ ಹೇಳಿಕೆಗೆ ಟೀಕೆಗಳು ವ್ಯಕ್ತವಾಗಿತ್ತು. ಈ ಟೀಕೆಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಭಾಗವತ್, 'ನನ್ನ ಹೇಳಿಕೆಯನ್ನು ತಪ್ಪಾಗಿ ಬಿಂಬಸಲಾಗಿದೆ' ಎಂದು ಹೇಳಿದ್ದಾರೆ. ಭಾಗವತ್ ಅವರ ಹೇಳಿಕೆ 'ಭಾರತದ ಪ್ರತಿಯೊಬ್ಬ ಯೋಧನಿಗೂ ಮಾಡಿದ ಅಪಮಾನ' ಎಂದು ರಾಹುಲ್ ಟೀಕಿಸಿದರೆ, 'ಇದೊಂದು ಅತ್ಯಂತ ಹೀನ ಹೇಳಿಕೆ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದಾರೆ.



# ಉಮಾ ಭಾರತಿ ಸ್ಪರ್ಧೆ ಇಲ್ಲ

**ಲಖನೌ:** 2019ರ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಬಿಜೆಪಿಯ ಹಿರಿಯ ನಾಯಕಿ, ಕೇಂದ್ರ ಸಚಿವೆ ಉಮಾ ಭಾರತಿ ಸೋಮವಾರ ಹೇಳಿದ್ದಾರೆ. ಆದರೆ ಪಕ್ಷದ ಚಟುವಟಿಕೆಗಳಲ್ಲಿ ಎಂದಿನಂತೆ ಭಾಗವಹಿಸುತ್ತೇನೆ. ಆರೋಗ್ಯ ಸಮಸ್ಯೆ ಇರುವುದರಿಂದ ಮುಂದಿನ ಯಾವುದೇ ಚುನಾವಣೆಗೂ ಸ್ಪರ್ಧಿಸುವುದಿಲ್ಲ ಎಂದು ತಿಳಿಸಿದ್ದಾರೆ. ಪ್ರಸ್ತುತ ಕೇಂದ್ರ ಸರಕಾರದಲ್ಲಿ ಕುಡಿಯುವ ನೀರು, ನೈರ್ಮಲ್ಯ ಹಾಗೂ ಗಂಗಾ ಶುದ್ಧೀಕರಣ ಸಚಿವೆಯಾಗಿರುವ ಉಮಾ ಭಾರತಿ, ಝಾನ್ಸಿ ಲೋಕ ಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಎರಡನೇ ಅವಧಿಗೆ ಲೋಕಸಭೆ ಸದಸ್ಯರಾಗಿರುವ ಉಮಾ ಭಾರತಿ ಮೊದಲು ಸ್ಪರ್ಧಿಸಿದ್ದ ಚುನಾವಣೆಯಲ್ಲಿ ಸೋಲುಂಡಿದ್ದರು.

ಪಶ್ಚಿಮ ಏಷ್ಯಾ ಪ್ರವಾಸ: ವ್ಯಾಪಾರ ಮಾಡಲು ಭಾರತಕ್ಕೆ ಆಹ್ವಾನ

# ಪ್ರವಾಸ ಮುಗಿಸಿ ಮರಳಿದ ಮೋದಿ

ಪಿಟಿಐ ಮಸ್ಕತ್

ಪಶ್ಚಿಮ ಏಷ್ಯಾದ ಮೂರು ದಿನಗಳ ಪ್ರವಾಸದ ಕೊನೆಯ ದಿನವಾದ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಮಸ್ಕತ್‌ನಲ್ಲಿ ಗಲ್ಫ್ ಮತ್ತು ಪಶ್ಚಿಮ ಏಷ್ಯಾ ಪ್ರಾಂತ್ಯದ ಮುಖಂಡರನ್ನು ಭೇಟಿ ಮಾಡಿ ಬಂಡವಾಳ ಹೂಡಿಕೆ ಕುರಿತು ಮಾತುಕತೆ ನಡೆಸಿದರು. ಇದೇ ವೇಳೆ ಅವರು ಇಲ್ಲಿನ 125 ವರ್ಷಗಳಷ್ಟು ಪುರಾತನವಾದ ಶಿವ ಮಂದಿರಕ್ಕೆ ಭೇಟಿ ನೀಡಿ ಪ್ರಾರ್ಥಿಸಿದರು. ನಂತರ ಒಮಾನ್‌ನ ಅತಿ ದೊಡ್ಡ ಸುಲ್ತಾನ್ ಖಬೂಸ್ ಮಸೀದಿಗೆ ಭೇಟಿ ನೀಡಿದ್ದರು. ಭಾರತ-ಒಮಾನ್ ವ್ಯವಹಾರ ಸಭೆಯಲ್ಲಿ ಪ್ರಧಾನಿ ಮೋದಿ ವ್ಯಾಪಾರ ವಹಿವಾಟು ನಡೆಸಲು ಮತ್ತು ಬಂಡವಾಳ ಹೂಡಲು ಭಾರತ ಅತ್ಯಂತ ಆಕರ್ಷಣೀಯ ದೇಶವಾಗಿದೆ ಎಂದರು.

ಭಾನುವಾರ ರಾತ್ರಿ ಇಲ್ಲಿಗೆ ಆಗಮಿಸಿದ ಮೋದಿ ಅಂತಾರಾಷ್ಟ್ರೀಯ ವ್ಯವಹಾರಗಳು ಮತ್ತು ಸಹಕಾರ ವ್ಯವಹಾರಗಳ ಉಪ ಪ್ರಧಾನಿ ಸಯೀದ್ ಆಸಾದ್ ಬಿನ್ ತಾರಿಖ್ ಸೈದ್ ಅವರೊಂದಿಗೆ ದ್ವಿಪಕ್ಷೀಯ ಸಹಕಾರ ಕುರಿತು ಚರ್ಚಿಸಿದರು ಎಂದು ವಿದೇಶಾಂಗ ಇಲಾಖೆ ವಕ್ತಾರ ರವೀಶ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ಭಾನುವಾರ ರಾತ್ರಿ ಪ್ರಧಾನಿ ಮೋದಿ ಒಮಾನ್ ದೊರೆ ಸುಲ್ತಾನ್ ಖಬೂಸ್‌ಬಿನ್ ಸಯೀದ್ ಬರ್ಖಾ ಅವರೊಂದಿಗೆ ಉಭಯ ದೇಶಗಳ ಸಂಬಂಧ ಕುರಿತು ಮಾತುಕತೆ ನಡೆಸಿದರು. ಒಮಾನ್‌ನಲ್ಲಿರುವ ಭಾರತೀಯರು 'ಪ್ರಾಮಾಣಿಕ ಮತ್ತು ಪರಿಶ್ರಮಿಗಳು' ಎಂದು ದೊರೆ ಖಬೂಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಂತರ ಇಬ್ಬರೂ ಮುಖಂಡರು ಎಂಟು ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ. ವಾಣಿಜ್ಯ ವಿಷಯಗಳಲ್ಲಿ ಕಾನೂನು ಮತ್ತು ನ್ಯಾಯಾಂಗದಲ್ಲಿ ಸಹಕಾರ,ಆರೋಗ್ಯ, ಪ್ರವಾಸೋದ್ಯಮ ಹಾಗೂ ಬಾಹ್ಯಾಕಾಶ ಬಳಕೆ ವಲಯಗಳ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ವಿಶೇಷ ಸೇವೆ, ರಾಜತಾಂತ್ರಿಕ, ಅಧಿಕೃತ ಪಾಸ್‌ಪೋರ್ಟ್ ಹೊಂದಿರುವವರಿಗೆ ಪರಸ್ಪರ ವೀಸಾ ವಿನಾಯಿತಿ ನೀಡುವ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಇಲ್ಲಿನ ಸುಲ್ತಾನ್ ಖಬೂಸ್ ಕ್ರೀಡಾ ಸಮುಚ್ಚಯದಲ್ಲಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಭಾರತ ಹಾಗೂ ಒಮಾನ್ ದೇಶಗಳಲ್ಲಿ ಕೆಲವು ರಾಜಕೀಯ ಏರುಪೇರುಗಳಾದರೂ ಉಭಯ ದೇಶಗಳ ಸಂಬಂಧ ಗಟ್ಟಿಯಾಗಿದೆ. ಇಲ್ಲಿನ ಭಾರತೀಯರು ಎರಡೂ ದೇಶಗಳ ಸಂಬಂಧ ಬಲಗೊಳ್ಳಲು ಶ್ರಮಿಸುವಂತೆ ಕರೆ ನೀಡಿದ್ದಾರೆ.

ಇಬ್ಬರೂ ಮುಖಂಡರು ಇಂಧನ, ವ್ಯಾಪಾರ, ಆಹಾರ ಭದ್ರತೆ, ರಕ್ಷಣೆ ಮತ್ತು ಭದ್ರತೆ, ಗಣಿ ಹಾಗೂ ಇತರ ವಲಯಗಳಲ್ಲಿ ಪರಸ್ಪರ ಸಹಕಾರ ಕುರಿತು ಮಾತುಕತೆ ನಡೆಸಿದ್ದಾರೆ.

### ಮಸೀದಿಯ ವಿಶೇಷ

ಮಾನ್‌ನ ದೊರೆ ಸುಲ್ತಾನ್ ಖಬೂಸ್ ಅವರು ತಮ್ಮ 30ನೇ ವರ್ಷದ ಪಟ್ಟಾಭಿಷೇಕದ ಅಂಗವಾಗಿ ಈ ಬೃಹತ್ ಮಸೀದಿಯನ್ನು ನಿರ್ಮಿಸಿದ್ದಾರೆ. ಭಾರತದಿಂದ ತರಿಸಲಾದ 3 ಲಕ್ಷ ಟನ್ ಮರಳನಿಂದ ಭಾರತದವರೇ ಆದ 200 ಕೆತ್ತನೆ ಕೆಲಸಗಾರರು ಈ ಮಸೀದಿಯನ್ನು ಕಟ್ಟಿದ್ದಾರೆ. ಆಧುನಿಕ ಇಸ್ಲಾಂ ವಿನ್ಯಾಸ ಹೊಂದಿರುವ ಈ ಮಸೀದಿಯಲ್ಲಿ ಪ್ರಾರ್ಥನಾ ಮಂದಿರದಲ್ಲಿ 70 ಮೀಟರ್ ಅಗಲ 60 ಮೀಟರ್ ಉದ್ದದ ಪರ್ಷಿಯನ್ ದೇಶದ ನೆಲಹಾಸು ಹಾಸಲಾಗಿದೆ. ವಿಶ್ವದ ಎರಡನೇ ಅತಿ ದೊಡ್ಡ ಕಾರ್ಪೆಟ್ ಇದಾಗಿದ್ದು 600 ಮಹಿಳೆಯರು ನಾಲ್ಕು ವರ್ಷಗಳ ಕಾಲ ನೇಯ್ಗೆ ಮಾಡಿದ್ದಾರೆ.

### ಶಿವ ದೇಗುಲ ವಿಶೇಷ

ಮಸ್ಕತ್‌ನ ದೊರೆಯ ಅರಮನೆ ಬಳಿ ಇರುವ ಶಿವ ದೇವಾಲಯ ಮೋತೀಶ್ವರ ಮಂದಿರ ಎಂದೇ ಪ್ರಖ್ಯಾತಿ ಹೊಂದಿದ್ದು, 300 ವರ್ಷಗಳ ಇತಿಹಾಸ ಹೊಂದಿದೆ. ಗುಜರಾತ್‌ನ ಬನಿಯಾ ಸಮುದಾಯದ ವ್ಯಾಪಾರಿಯೊಬ್ಬರು 125 ವರ್ಷಗಳ ಹಿಂದೆ ಈ ದೇವಾಲಯವನ್ನು ಪುನರ್ ನಿರ್ಮಿಸಿದ್ದಾರೆ. ಸೀಬ್ ವಿಮಾನ ನಿಲ್ದಾಣದಿಂದ ಕೇವಲ 35 ಕಿಮೀ ದೂರದಲ್ಲಿರುವದೂ ಒಂದು ವಿಶೇಷ. ಗುಜರಾತಿಗಳು ಆರಂಭದಲ್ಲಿ ವ್ಯಾಪಾರವನ್ನು ಆರಂಭಿಸಿದ್ದೇ ಇಲ್ಲಿಂದ ಎಂದು ಭಾವಿಸಲಾಗಿದೆ.

**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾನೀನಿನಿ., ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ

**ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ ದಿನಾಂಕ : 08-02-2018**

ಈ ಕಛೇರಿಯ ಮೂಲ ಟೆಂಡರ್ ಇ-ಪ್ರಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 31/2017-18 ದಿನಾಂಕ: 30.11.2017 ರ ಟೆಂಡರ್ ಪ್ರಕಟಣೆಯ ಕ್ರಮ ಸಂಖ್ಯೆ 3, 7, 12, 21, 25, 27, 30, 32 ಮತ್ತು 33 ರ ಕಾಮಗಾರಿಗಳಿಗೆ ಟೆಂಡರ್ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕವನ್ನು 19.02.2018 ರ ವರೆಗೆ ವಿಸ್ತರಿಸಲಾಗಿದ್ದು, ಸದರಿ ಟೆಂಡರ್ ಅನ್ನು ದಿನಾಂಕ 21.02.2018 ರ ಸಂಜೆ 4.30 ರಂದು ತೆರವುಗೊಳಿಸಲಾಗುವುದು. ಉಳಿದಂತೆ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕಾನೀನಿನಿ, ಹೇ.ಬ.ನಾ ವಿಭಾಗ, ಹೊಳೆನರಸೀಪುರ

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ,ಕನೀನಿನಿ,ಮ.ಎ.ಕಾ.ನಿ.ವಿಭಾಗ ನಂ 1 ರಾಮದುರ್ಗ
ನಂ.ಕನೀನಿನಿ./ಮ.ಎ.ಕಾ.ನಿ.ವಿ.1/ಡಿಬಿ./ಟೆಂಡರ/17-18/1579, ದಿನಾಂಕ:-08/02/2018.

**ಅಲ್ಪಾವಧಿ ಟೆಂಡರ ಪ್ರಕಟಣೆ.**

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ.ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿದವರಿಂದ ಮಲಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ 1, ರಾಮದುರ್ಗ ಅಡಿಯ 2701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಒಟ್ಟು 15 ಕಾಲೋನಿ ಹಾಗೂ ಆಯ್.ಬಿ. ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಸಾಂಪ್ರದಾಯಿಕ ಟೆಂಡರ ಕರೆಯಲಾಗಿದೆ.

ಈ ಕಾಮಗಾರಿಗಳ ಅಂದಾಜು ಮೊತ್ತವು ರೂ. 0.99 ಲಕ್ಷ ಇದ್ದು, ಇ.ಎಂ.ಡಿ. ಮೊತ್ತ ರೂ. 2,500/-ಇದ್ದು, ಅರ್ಜಿ ಶುಲ್ಕ ಜಿ.ಎಸ್.ಟಿ. ಸಹಿತ ರೂ. 1120 /- ಇದ್ದು, ಅವಧಿ:- ಒಂದು ತಿಂಗಳ ಕಾಲಾವಧಿ ಇರುವುದು. ಮಳೆಗಾಲ ಸಹಿತ.

ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ: 16/02/2018 ಸಾಯಂಕಾಲ 5-30ರ ವರೆಗೆ, ಖಾಲಿ ಟೆಂಡರ ಪುಸ್ತಕಗಳನ್ನು ಒದಗಿಸುವ ದಿನಾಂಕ:- 19/02/2018 ಭರ್ತಿ ಮಾಡಿದ ಟೆಂಡರ ಸಲ್ಲಿಸುವ ದಿನಾಂಕ:- 21/02/2018 (ಸಾಯಂಕಾಲ 4.00 ಗಂಟೆಯವರೆಗೆ) ಈ ಕಚೇರಿಯಲ್ಲಿ ಟೆಂಡರ ತೆರೆಯುವ ದಿನಾಂಕ:- 22/02/2018 (ಸಾಯಂಕಾಲ 5.00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ:- ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಕನೀನಿನಿ, ಮ.ಎ.ಕಾ.ನಿ.ವಿಭಾಗ ನಂ 1 ರಾಮದುರ್ಗ ದೂರವಾಣಿ ಸಂಖ್ಯೆ. 08335-242143.

ಸಹಿ/- (ಶ್ರೀ. ಎಮ್.ಎಚ್.ಭೀಮಕ್ಕನವರ)
ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ಮ.ಎ.ಕಾ.ನಿ.ವಿಭಾಗ ನಂ 1 ರಾಮದುರ್ಗ.

**ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ನಾ.ಬ.ದಂ.ಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣಿ-584111, ತಾ: ದೇವದುರ್ಗ, ಜಿ: ರಾಯಚೂರು.**
ಸಂಖ್ಯೆ/ಕೃಭಾಜನಿನಿ/ನಾಬದಂಕಾ/ವಿ-6/ತಾಶಾ-3/ MI Tank Filling/ಟೆಂಡರ್/2017-18/ 1105, ದಿನಾಂಕ: 06-02-2018.

**ಅಲ್ಪಾವದಿ ಟೆಂಡರ್ ಪ್ರಕಟಣೆ**
**(ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್ ಮುಖಾಂತರ ಮಾತ್ರ)**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ (ನಿ.) ಬೆಂಗಳೂರು/ಆಲಮಟ್ಟಿ ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ ಶೇಕಡಾವಾರು ಆಧಾರದ ಮೇಲೆ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್ www.eproc.karnataka.gov.in ಮುಖಾಂತರ ಕರೆಯಲಾಗಿದ್ದು, ಸದರಿ ಟೆಂಡರಿನಲ್ಲಿ KBJNL ಕೆಟೆಗರಿ-3 ಮತ್ತು ಮೇಲಿನ ದರ್ಜೆ ಅರ್ಹ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸದರಿ ಟೆಂಡರುದಾರರು ದ್ವಿ-ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅಪ್ಲೋಡ್ ಮಾಡುವುದು. ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ.

" 1. FILLING UP OF MANSLAPUR AND MARCHED MI TANK THROUGH CONSTRUCTION OF DISTRY NO 36 FROM KM 0.00 TO 2.73 AND FEEDER CHANNEL FROM KM 0.00 TO 0.665 THE CANAL NETWORK OF NRBC EXTENSION UNDER UKP STAGE III RAICHUR TALUK (Indent No. 14005)"
2. Amount put to Tender:- Rs. 124.88Lakhs.
3. EMD :-Rs. 1.88Lakhs. (Transaction fee As per E-procurement Portal.).
4. Period:09months (including monsoon).

ಟೆಂಡರ್ ಅಧಿಸೂಚನೆ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.

- ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 09/02/2018 ರಿಂದ 17/02/2018ರವರೆಗೆ ಸಮಯ ಸಂಜೆ: 4.00 ಗಂಟೆಯವರೆಗೆ ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್‌ನಲ್ಲಿ ನಿಗದಿತ ಟೆಂಡರ್ ಶುಲ್ಕ ಪಾವತಿಸಿ ಡೌನ್ ಲೋಡ್ ಮಾಡಿಕೊಳ್ಳಬಹುದು.
- ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 17/02/2018ರ ಸಂಜೆ: 4.00 ಗಂಟೆಯವರೆಗೆ.
- ಟೆಂಡರ್‌ಗಳ ತಾಂತ್ರಿಕ ಬಿಡ್ ಲಕೋಟೆ-1ನ್ನು ದಿನಾಂಕ: 19/02/2018ರಂದು (ಸಾಧ್ಯವಾದಲ್ಲಿ) ಸಮಯ ಬೆಳ್ಳಿಗೆ: 11.00 ಗಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣಿ, ತಾ: ದೇವದುರ್ಗ - ಇವರ ಕಛೇರಿಯಲ್ಲಿ ತೆರೆಯಲಾಗುವುದು.
- ಟೆಂಡರ್‌ಗಳ ಆರ್ಥಿಕ ಬಿಡ್ ಲಕೋಟೆ-2ನ್ನು ದಿನಾಂಕ: 23/02/2018ರಂದು (ಸಾಧ್ಯವಾದಲ್ಲಿ) ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣಿ, ತಾ: ದೇವದುರ್ಗ - ಇವರ ಕಛೇರಿಯಲ್ಲಿ ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್‌ನಲ್ಲಿ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟೆ ಪೋರ್ಟಲ್ www.eproc.karnataka.gov.in ಜಾಲತಾಣದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಾಬದಂಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣಿ-584111
ವಾ.ಸಾ.ಇ/ರಾಯಚೂರ/547/ಎಂ.ಸಿ.&ಎ/2017-18